# ರಾಜ್ಯದ ಕೃಷಿ ಇ-ಮಾರುಕಟ್ಟೆ ವ್ಯವಸ್ಥೆಗೆ ಕೇಂದ್ರದ ಪ್ರಶಸ್ತಿ

- http://uccindia.org/
- Date August 22, 2016
- **ಮೂಲ: ವಿಜಯವಾಣಿ**




ಕರ್ನಾಟಕದ ಆನ್‌ಲೈನ್ ಕೃಷಿ ಮಾರುಕಟ್ಟೆ ವ್ಯವಸ್ಥೆಗೆ ಪ್ರತಿಷ್ಠಿತ ಡಿಎಲ್‌ಶಾ ಪ್ರಶಸ್ತಿ ದೊರಕಿದೆ. ದೆಹಲಿಯಲ್ಲಿ ನಡೆದ 11ನೇ ರಾಷ್ಟ್ರೀಯ ಗುಣಮಟ್ಟ ಸಮ್ಮೇಳನದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ರಾಷ್ಟ್ರೀಯ ಇ-ಮಾರುಕಟ್ಟೆ ಸೇವೆಗಳಿಂದ ಪ್ರತಿವರ್ಷ ಡಿಎಲ್ ಶಾ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ.

**ಪ್ರಶಸ್ತಿಬಗ್ಗೆ:**

ರಾಜ್ಯದ ಕೃಷಿ ಇ-ಮಾರುಕಟ್ಟೆಯು ದಕ್ಷ ಹಾಗೂ ಪಾರದರ್ಶಕವಾಗಿದ್ದು, ಉತ್ತಮ ತಂತ್ರಜ್ಞಾನ ಅಳವಡಿಸಿಕೊಂಡಿದೆ. ಅಲ್ಲದೆ, ರೈತರಿಗೆ ಅನುಕೂಲವಾಗುವಂತೆ ಸ್ಪರ್ಧಾತ್ಮಕ ದರ ನಿಗದಿ, ವ್ಯಾಪಾರಸ್ಥರಿಗೆ ಕೇಂದ್ರಿಕೃತ ಏಕ ಲೈಸೆನ್ಸ್ ನೀಡುವ ಪದ್ಧತಿ, ಗುಣಮಟ್ಟ ಆಧರಿಸಿ ಬಿಡ್ಡಿಂಗ್ ನಡೆಸಲು ಅವಕಾಶ ಇತ್ಯಾದಿ ಅಂಶಗಳ ಆಧಾರದಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಲಭ್ಯವಾಗಿದೆ. ಕರ್ನಾಟಕದಲ್ಲಿರುವ 157 ಪ್ರಮುಖ ಕೃಷಿ ಮಾರುಕಟ್ಟೆಗಳ ಪೈಕಿ 142ರಲ್ಲಿ ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಲಾಗಿದ್ದು, ದೇಶದಲ್ಲೇ ಮುಂಚೂಣಿಯಲ್ಲಿದೆ. ಒಟ್ಟಾರೆ ಆನ್‌ಲೈನ್ ಮಾರುಕಟ್ಟೆಯಲ್ಲಿ 25 ಲಕ್ಷ ಕೃಷಿಕರು ನೋಂದಾಯಿತರಾಗಿದ್ದಾರೆ. ಇದುವರೆಗೆ, 320 ಲಕ್ಷ ಕ್ವಿಂಟಾಲ್ ಪ್ರಮಾಣದ ವ್ಯಾಪಾರ ಮಾಡಲಾಗಿದ್ದು, ಇದರ ಮೌಲ್ಯ 26 ಸಾವಿರ ಕೋಟಿ ರೂ.